ಅಷ್ಟು ದೊಡ್ಡ ಬೆಂಗಳೂರಾಗಿನ ಒಂದು ನಗರದ ನಡುವಿನ ಹತ್ತೆಂಟು ಮನೆಗಳ ಗುಂಪಿನಲ್ಲಿ ಪಿಂಜಿ, ಬೆಳಗ ಮುಂಜಾನಿ ಒಂದೆರಡು ಮನಿಗೆ ಕಸಮುಸ್ರಿ, ಬಟ್ಟೆಂತ ಹೋದಾಕಿ ಇನ್ನಾ ಬಂದಿರಲಿಲ್ಲ. ಶೇಕ್ರ ಐತುವಾರ ರಜೆ ಎಂದು ದೋಸ್ತಿಯಾದ ಚಂದಪೂರ ಊರಾಗಿನ ಶಾಕಯ್ಯನ ಜತೆ ಮೊಬೈಲ್ಲಿ ಮಾತಾಡುತ್ತಲೇ, ಬೀದ್ಯಾಗ ನಿಂತ ಓಮಿನಿ ಕಾರ್ ಮುಂದ ನಾಸ್ತಾ ಮಾಡಿ ಮಾರ್ಕೇಟಿಗೆ ಹೋಗಿ, ಕಾಯಿಪಲ್ಯ ತರಬೇಕೆಂದು ನಿಂತಿದ್ದ. ಈ ಕಡೆ ಅಪ್ಪ ರಾಗಪ್ಪನ ಕಾಲ್ ಬಂದ ತಕ್ಷಣ ಶೇಕ್ರ ಅಪ್ಪನ ಕಂಡ್ರ ಮೊದ್ಲಿಂದನೂ ಪುಕ್ಕ, ತಡೀಲಾರದ ರಾಗಪ್ಪನ ಪೋನೆತ್ತಿ ಹೇಳಪ್ಪಂದ. 'ನೀವು ಗಂಡಹೆಣ್ತಿ ಬೆಂಗಳೂರಾಗ ಇರೋದು ಬ್ಯಾಡ... ಊರಿಗೆ ಬಂದು ಬಿಡ್ರಿ... ಅಲ್ಲಿ ನೀವು ಇಷ್ಟುದಿನ ದುಡಿದಿದ್ದು ಸಾಕು... ಅಲ್ಲಿ ಏನ್ ಮಿಂಡ್ರಿಕೆಲ್ಸ ನಡೀತೈತಿ ಅಂಬೋದು ನನಗ ಎಲ್ಲಾ ಗೊತ್ತಾಗೈತಿ... ನೀವಿಬ್ರು ಇಲ್ಲೇ ಹೊಲಮನಿ ನೋಡಿಕೊಂಡ್ರ ಸಾಕು...' ಅಂತ ರಾಗಪ್ಪ ಶೇಕ್ರಗ ಹೇಳಿದೇಟಿಗೆ ಶೇಕ್ರ, ಹೆದ್ರಿದವನೇ ಹಿಂದಮುಂದ ನೋಡದೆ ಆಗಿಂದಾಗೆ ಪಿಂಜಿನ ಕರಕೊಂಡು, ಗಂಟು ಮೂಟೆ ಕಟ್ಟಕೊಂಡು ಮರುದಿನ ಚಂದಪೂರಕ್ಕೆ ಬಂದಿಳಿದಿದ್ದ.

ಶೇಕ್ರ ಊರಿಗೆ ಬಂದಮೇಲೆ ನಾಕು ದಿನ ಹೊಸದಾಗಿ ಮನ್ಯಾಗ ಸುಮ್ನೆ ಕೂತ. ಊರಾಗಿನ ಶಾಕಯ್ಯ ಮನೆಗೆ ಕರೆದ್ರೂ ಅವತ್ತು ಹೋಗಲಿಲ್ಲ. ಮನೇಲಿ ಸುಮ್ನೆ ಕೂತ. ರಾಗಪ್ಪನೂ ಬ್ಯುಸಿ ಆದವನು ಶೇಕ್ರಗ ಏನೂ ಕೆಲ್ಸ ಹೇಳಲಿಲ್ಲ, ಕೇಳಲಿಲ್ಲ. ಬಂದಾಗಿನಿಂದ ಮಗ, ಸೊಸಿನ ನೋಡಿ ಮಾರಿ ಉರ್ಕೊಳ್ತನಿದ್ದ. ರಾಗಪ್ಪನ ಮುಂದ ಶೇಕ್ರಗ ಮನೆ ಜವಾಬ್ದಾರಿ ಅಂಬೋದು ಈಗ ಪೂರ್ಣ ಇಲ್ದಂಗಾತು. ಸುಮ್ನೆ ಕೂತವನು ಊರಾಗ ಅಲ್ಲಿಲ್ಲಿ ತಿರುಗಿ, ಹಳೆಮಂದಿ ಜತೆ ಹೊಸದಾಗಿ ಕೆಲ್ಸಬಗಿಸಿ ಕೇಳಿ ಹೋಗಬೇಕೆನ್ನುಕೊಂಡ. ಯಾರ್ ಒಂದು ಕೆಲ್ಸದ ದಾರಿ ನೆಟ್ಟಗ ಹೇಳಲಿಲ್ಲ. ತಮ್ಮ ಉದ್ರಿ ಸಂಘದೊಳಗಿದ್ದ ಇಸ್ಪೀಟ್ ಆಟ, ಮಟಕದ ಹುಚ್ಚು ಬೆಳೆಸಿ ಕೆಡಿಸಬೇಕು ಅನ್ನೋ ತರಾತುರಿಯಲ್ಲಿದ್ರು.

ಈ ಕಡೆ ಪಿಂಜಿ, ಚಂದಪೂರಿಗೆ ಬಂದಾಗಿನಿಂದ ಹೊರಗ ಹೋಗದೆ ಮನೆನೇ ಎಲ್ಲಾ ಅನ್ನಂದು ಮಾವ ರಾಗಪ್ಪನ ಬಂದೋಬಸ್ತಿನಲ್ಲಿ ಮನೆ ಕೆಲ್ಸದಲ್ಲಿ ಬಿಸಿಯಾಗಿದ್ಲು. ಆದ್ರ ಪಿಂಜಿಗೆ ಮದ್ವೆಯಾಗಿ ಐದು ವರ್ಷ ಆಗಾಕ ಬಂದಿದ್ರೂ ಶೇಕ್ರನ ಕಡೆಯಿಂದ ಹೊಟ್ಟೇಲಿ ಹುಳಪಳಂತ ಏನೇನೂ ಬದಲಾವಣೆ ಆಗಿರಲಿಲ್ಲ. ಪಿಂಜಿಗೆ ಇದೊಂದು ಯಾವಾಗಲೂ ಕಾಡುತ್ತಿತ್ತು. ಇದೇ ವಿಚಾರನ ಶೇಕ್ರಗ ಬಿಟ್ಟು ಯಾರ್ ಮುಂದ ಹೇಳದಂಗ ಆಗಿತ್ತು. 'ಇವಂತಾಕ ಏನಿಲ್ಲ ಅದ್ಕ ಹೆಣ್ತಿನ ಗೊಡ್ಡುಮಾಡಿ ಕುಂದ್ರಿಸ್ಯಾನ...' ಅಂತ ರಾಗಪ್ಪ ಅಲ್ಲಿಲ್ಲಿ ಹೇಳಿಕೆಂತ ತಿರಿಗಿ ಶೇಕ್ರ ಮನಿಗೆ ಬಂದಾಗೊಮ್ಮೆ ಆಡಿಸ್ಯಾಡೋದು ಬಿಡಲಿಲ್ಲ. ಪಿಂಜಿ ಕೂಡ 'ನನ್ ಹತ್ತಿರಕ ಬರೋದು ಬಿಟ್ಟ, ಈ ಮನೆ ನೆಟ್ಟಗಿಲ್ಲ, ಮನೆಮುಂದ ಮಾಡಿಟ್ಟ ನೆರಿಕಿಬಚ್ಚಲ ನೆಟ್ಟಗಿಲ್ಲ. ಸರ್ಕಾರ ಕಡಿಂದ ಮನಿಗೆ ಶೌಚಾಲಯ ಮಾಡ್ಸು, ನಿಮಪ್ಪ ಇವ್ಯಾವು ಮಾಡ್ಸಲ್ಲ ನೀನಾದ್ರು ಮಾಡ್ಸು...' ಅಂತ ಪಿಂಜಿ ಮನೆಕೆಲ್ಸ ಮಾಡುತ್ತಲೇ ಕಿರಿಕಿರಿ ಕೊಡತೊಡಗಿದ್ಲು. ಮನ್ಯಾಗಿದ್ರ ರಾಗಪ್ಪನ ಕಿರಿಕಿರಿ, ಈಕಡೆ ಪಿಂಜಿ ಕಾಟ ತಾಳಲಾರದ ಊರಾಗಿನ ಕೆಟ್ಟ ಚಟದವರ ಸಂಘನೂ ಬಿಟ್ಟು ಗುಡಿತಾಕಿದ್ದ ಶಾಕಯ್ಯನ ಮನೆಕಡೆ ಹೋಗೋದು ರೂಢಿ ಮಾಡಿಕೊಂಡ. ಶಾಕಯ್ಯನು ಶೇಕ್ರನ ಸುಮ್ನೆ ಮನೆಯೊಳಗ ಕೂರಿಸಿಕೊಳ್ಳಲಿಲ್ಲ. ಏನಾದ್ರೂ ಒಂದು ಕೆಲ್ಸ ಹೇಳಿಹೋಗುತ್ತಿದ್ದ. ಆ ಕೆಲ್ಸಕ್ಕ ತಕ್ಕಂತ ಟಿಪ್ಸ್ ಕೊಡುತ್ತಿದ್ದ.

ಶೇಕ್ರ ಬೆಂಗಳೂರಿಂದ ಬಂದು ಮೆಲ್ಲಕ ಎರಡು ತಿಂಗಳ ಆಗಾಕ ಬಂದ್ರೂ ಅಪ್ಪನಂಬೋ ರಾಗಪ್ಪ ಒಂದು ಕೆಲ್ಸನೂ ಹೇಳಲಿಲ್ಲ. ಏನಂಥಾನೂ ಕೇಳಲಿಲ್ಲ. ಪಿಂಜಿ ಹೇಳಿದಂಗ ಮನೆಕೆಲ್ಸ ಮಾಡಾಕೂ ಬಿಡಲಿಲ್ಲ. 'ಹೆಣ್ತಿಮಾತು ಕೇಳಿಕೊಂಡು ಹಿರೇತನ ಮಾಡಾಕ ಬರಬ್ಯಾಡಲೇ ತರ್ಗ. ಈ ಮನಿಗೆ ಏನ್ ಮಾಡಬೇಕು ಅಂಬೋದು ನನಗ ಎಲ್ಲಾ ಗೊತ್ತೈತಿ... ಮೊದ್ಲಿಂದ ಈ ಮನಿಸುತ್ತ ದೇವ್ರುಗುಡಿ ಇರೋ ಮನ್ಯೈತಿ... ನಿನ್‌ಹೆಣ್ತಿ ಸಂಡಾಸು ಕೂಡಾಕ ಇಲ್ಲಿ ಶೌಚಾಲಯ ಮಾಡಾಕ ಸತ್ರು ಬಿಡಲ್ಲ...' ಅಂತ ಗದರಿಸಿ ಬಿಡುತ್ತಿದ್ದ.

